ಉಮಾ ಎಂ.ವಿ. ಬೆಂಗಳೂರು
ನೆರಳಿಗೂ, ಇರುಳಿಗೂ ವ್ಯತ್ಯಾಸವೇನು?



ಬೆಳಕೇ. ಅದು ವಸ್ತುಗಳ ಮೇಲೆ ಬಿದ್ದರೆ ನೆರಳು; ಓಡಿಹೋದರೆ ಇರುಳು.

ಜಯಶ್ರೀ, ಬೆಂಗಳೂರು
ಅಮ್ಮ ಕೊಟ್ಟದ್ದು, ಅಮ್ಮನ ಮನೆ ಅಂತೀವಿ. ಅಪ್ಪ ಅಂತ ಹೇಳೋದೇ ಇಲ್ಲ. ಪಾಪ ಅಲ್ವ ಅಪ್ಪ?
'ಹಿಂದುಳಿದವರ' ಬಗ್ಗೆ ಪ್ರಚಾರ ಕಡಿಮೆಯೇ. ಅಪ್ಪ ಹಿಂದುಳಿದವನಷ್ಟೇ ಅಲ್ಲ, ಅಮ್ಮನ ಹಿಂದುಹಿಂದೇ ಉಳಿದವ.

ಎಸ್. ಶರತ್, ಬೆಂಗಳೂರು
ಒಂದು ವೇಳೆ ಹೆಣ್ಣು ಸುಗಂಧರಾಜ ಹೂವನ್ನು ಮುಡಿಯುವಂತಿದ್ದಿದ್ದರೆ?
ಸುಗಂಧರಾಣಿ ಎಂದು ಕರೆಯಬಹುದಾಗಿತ್ತು.

ಬೂಕನಕೆರೆ ವಿಜೇಂದ್ರ, ಮೈಸೂರು
ಸಂಸಾರಿಗಿಂತಲೂ ಸನ್ಯಾಸಿಯೇ ಹೆಚ್ಚು ವರ್ಷ ಬದುಕುತ್ತಾನಲ್ಲಾ?



ಆರಂಕುಶವಿಟ್ಟು ಥಂ ಎನಿಸುವವರಿಲ್ಲದೆ ತನ್ನಿಷ್ಟದಂತೆ ಬದುಕುವುದೇ ಅದರ ರಹಸ್ಯವಂತೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ಸಾಯ್ತೀನಿ ಸಾಯ್ತೀನಿ ಅನ್ನೋವ್ರು ಸಾಯೋದಿಲ್ಲ. ಬದುಕ್ತೀನಿ, ಬದುಕ್ತೀನಿ ಅನ್ನೋವ್ರು ಸತ್ತೋಗ್ತಾರೆ. ಯಾಕೆ?
ತನ್ನ ಕೋಣವನ್ನು ಕುಡುಕರು ಲಾರಿ ಓಡಿಸುವಂತೆ ಓಡಿಸಿ ಸಿಕ್ಕಸಿಕ್ಕವರನ್ನು ಸೆಳೆಯುವ ಯಮನದೇ ತಪ್ಪಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ಚಪಾತಿಗೆ ಇಲ್ಲದ ರಂಧ್ರಗಳು ದೋಸೆಗೆ ಇರುತ್ತವೆ. ಏಕೆ?
ಲಟ್ಟಣಿಗೆಯ ಪ್ರಯೋಗವಾದರೆ ನವರಂಧ್ರಗಳೂ ಮುಚ್ಚಿಹೋಗುತ್ತವಂತೆ.

ಬಾ.ರಂ. ಸುರೇಶ್, ಶಿವಮೊಗ್ಗ
ಮದುವೆ ಆದಮೇಲೂ ಗಂಡನೊಡನೆ ಬಾಳ್ವೆ ನಡೆಸದ ಹೆಂಡತಿಯನ್ನು ಏನೆಂದು ಕರೆಯಬಹುದು ಶಿವಾ?
ಹೀಗೆ ಏನೇನೆಂದೋ ಕರೆದೂ ಕರೆದೇ ಅವರ ಸಂಸಾರ ಹಾಳಾಗಿದ್ದಂತೆ. ಕರೆಯದೆ ಸುಮ್ಮನಿದ್ದುಬಿಡಿ ಸಿವಾ.

ಉಷಾ ಸೋಗಾಲ್, ತುರಹಳ್ಳಿ
ಪೊಲೀಸ್ ಸ್ಟೇಷನ್ನಿನ ಮೆಟ್ಟಿಲು ಹತ್ತಬೇಕು ಅನ್ನುತ್ತಾರಲ್ಲ, ಏಕೆ?
ನೀರಿಳಿಸುವಂತಹ ಸ್ಥಳಗಳಿಗೆ ತಲುಪಲು (ಉದಾ: ಬೆಟ್ಟ ನದಿಯನ್ನಿಳಿಸುತ್ತದೆ) ಹತ್ತಲೇಬೇಕಂತೆ.

ದಿನೇಶ್, ಗುಡ್ಡದೂರು
ನಿಮ್ಮ ಮೆದುಳನ್ನು ಸರ್ಕಾರದವರು ದುಡ್ಡಿಗೆ ಕೇಳಿದರೆ ಕೊಡಲು ಸಿದ್ಧರಿದ್ದೀರಾ?
ಹಾಗೆ ಕೊಟ್ಟುಬಿಟ್ಟರೆ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲೂ ಲಂಚ ನೀಡಬೇಕಾದ್ದರಿಂದ, ಕೊಡಲ್ಲ.

ದೇವೇಂದ್ರ, ಕಡೂರು
ಜಾಸ್ತಿ ಪ್ರೀತಿ ಇರುವ ಕಡೆ ಅನುಮಾನ ಇರುತ್ತಂತಲ್ಲ?
ಗೋಕುಲದ ಗೋಪಿಕೆಯರು ಕೃಷ್ಣನ ಬಗ್ಗೆ ಹೊಂದಿದ್ದಂತಹ ಪ್ರೀತಿ ಇದ್ದರೆ ಅನುಮಾನವಿರಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯ 'ಪುನೀತ'ನಾಗಲು ಏನು ಮಾಡಬೇಕು ಸಾರ್?
ನುಡಿಯಲ್ಲಿ ನವನೀತ, ನಡೆಯಲ್ಲಿ ವಿನೀತ ಆಗಬೇಕು.

ಉಷಾ ರಾಜಾರಾವ್, ಬೆಂಗಳೂರು
ವೇಗವಾಗಿ ಸಾಗುತ್ತಿರುವ ವಿಜ್ಞಾನಿಗಳು, ನಿಸರ್ಗರಕ್ಷಣೆಗೆ ಪ್ರೇರೇಪಿಸುತ್ತಿರುವ ಜನರು ಒಟ್ಟಾಗಿರುವ ಕಾಲ ಯಾವುದು?
'ಆಂಬೊಡೆ ರುಚಿಕರವೋ, ಕಬಾಬೋ' ಎಂಬ ಗಂಭೀರ ಚರ್ಚೆಗಳಲ್ಲಿ. ಮಿಕ್ಕಂತೆ ಅವು ವಿರುದ್ಧಧ್ರುವಗಳೇ.

## ವಾರದ ಪ್ರಶ್ನೆ

ವಿ. ಗೋವಿಂದಾಚಾರಿ, ಮೈಸೂರು
ಮದುವೆಗೆ ಮುನ್ನ ವಧುಪರೀಕ್ಷೆ ಉಂಟು. ವರಪರೀಕ್ಷೆ ಏಕಿರುವುದಿಲ್ಲ?
ಮನೆ ನಿಲ್ಲುವುದೇ ಹೆಣ್ಣಿನ ಮೇಲಾದ್ದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮನುಷ್ಯ ಗಂಭೀರನಾಗುವುದು ಯಾವಾಗ?
'ನಿಧನ ಎಂದು ಘೋಷಿಸುವುದಕ್ಕೆ ಮುಂಚಿನ ದಿನ' ಎಂದನೊಬ್ಬ ನರ್ಸಿಂಗ್‌ಹೋಂ ವೈದ್ಯ.

19ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ನೀರಿನಲ್ಲಿ ಬಿದ್ದವನಿಗೆ ಪಾರಾಗಲು ಒಂದು ಕಟ್ಟಿಗೆಯ ತುಂಡು ಸಾಕು. ರಾಜಕೀಯದಲ್ಲಿ ಬಿದ್ದವನಿಗೆ?
ಗುಂಡು, ತುಂಡು, ಫಂಡು, ಫಂಡು, ಫಂಡು, ಫಂಡು...

ಆರ್. ಮಧುಸೂದನ್, ಹಾಸನ
ಬಾರ್‌ಗೆ 'ಮಧುಶಾಲಾ ಲಿಕ್ಕರ್ಸ್' ಎಂದು ಹೆಸರಿಟ್ಟಿದ್ದಾರಲ್ಲಾ...?




ಕುಡಿತ 'ಕಲಿಸುವ' ಜಾಗವಾದ್ದರಿಂದ ಶಾಲೆ ಅನ್ನಬಹುದಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪ್ರಾಣಕ್ಕೂ, ಸ್ನೇಹಕ್ಕೂ ಏನು ವ್ಯತ್ಯಾಸ?
ಪ್ರಾಣ ದೇಹದ ಎಂಜಿನ್. ಸ್ನೇಹ ಇಂಧನ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಎಲ್ಲ ಪ್ರಶ್ನೆಗಳಿಗೂ ಉತ್ತರಿಸುವ ಪ್ರತಿಭೆ ಇರುವ ನಿಮ್ಮನ್ನು 'ಉತ್ತರಕುಮಾರ' ಎನ್ನಬಹುದೆ?
ಊಹೂಂ. ನಾನು ನಿಮ್ಮೆಲ್ಲರ ಪ್ರಶ್ನೆಗಳಿಗೆ 'ಜವಾಬುದಾರ' ಅಷ್ಟೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನ ವೈರಿ ಯಾವುದು ಸರ್?
ಅವಿದ್ಯೆ.

■ ರಾಮ್

ನೀವೂ ಪ್ರಶ್ನೆ ಕೇಳಿ: editorsu@sudha.co.in